# ಪ್ರೀತಿ– ಪ್ರಣಯದ ಕಲ್ಪನೆಗಳ ಮಧ್ಯೆ..



ಈಶ್ವರ ಬಡಿಗೇರ

★ ಡಾ.ಕೆ.ಎಸ್.ಪವಿತ್ರ

ಬುಕ್ ಹೌಸ್‌ನಲ್ಲಿ ಕನ್ನಡ– ಇಂಗ್ಲಿಷ್ ಪುಸ್ತಕಗಳ ಮಧ್ಯೆ ಅಲೆದಾಡುತ್ತಿದ್ದೆ. ಪುಸ್ತಕಗಳತ್ತ ಒಂದೊಂದಾಗಿ ಕಣ್ಣಾಡಿಸುವಾಗ 'ಮಿಲ್ಸ್ ಎಂಡ್ ಬೂನ್' ಕಾದಂಬರಿ ಕಣ್ಣಿಗೆ ಬಿತ್ತು. ಎಂ ಎಂಡ್ ಬಿ ಎಂದು ನಾವು ಚಿಕ್ಕದಾಗಿ ಕರೆಯುತ್ತಿದ್ದ ಕಾದಂಬರಿಗಳ ಸರಣಿ. ಸಾಯಿಸುತೆ, ಉಷಾನವರತ್ನರಾಂ ರ ಕಾದಂಬರಿಗಳ ನೆನಪೂ ಥಟ್ಟನೆ ಬಂತು. ಲೇಖಕಿಯಾಗಿದ್ದ ಅಮ್ಮನ ಪ್ರಭಾವದಿಂದ ನಮ್ಮ ಮನೆಯಲ್ಲಿ ಎಲ್ಲರಿಗೂ ಓದುವ 'ಹುಚ್ಚು'! ಕಥೆ, ಕಾದಂಬರಿ, ಕವನ, ವಿಮರ್ಶೆ, ಇಂಗ್ಲಿಷ್ –ಕನ್ನಡ ಎಲ್ಲಾ ಪುಸ್ತಕಗಳನ್ನೂ ನಾವು ಅಕ್ಕ–ತಂಗಿಯರು ಎಡೆಬಿಡದೆ ಓದುತ್ತಿದ್ದೆವು. ಹದಿಹರೆಯದಲ್ಲಿ ನಾವು ಓದಿದ ಉಷಾನವರತ್ನರಾಂ –ಸಾಯಿಸುತೆ ಕಾದಂಬರಿಗಳು ನೀಡಿದ ಸೊಗಸಿನ ಅನುಭವ ಇಂದಿಗೂ ಮನದಲ್ಲಿ ಹಸಿರಾಗಿದೆ. ಇನ್ನೂ ಸ್ವಲ್ಪ ದೊಡ್ಡವರಾದ ಮೇಲೆ ಇಂಗ್ಲಿಷ್ ಕಾದಂಬರಿಗಳು ಆಕರ್ಷಕ ಎನಿಸತೊಡಗಿದವು.

ಪ್ರೀತಿ, ಪ್ರೇಮ, ಲೈಂಗಿಕತೆ ಇವೆಲ್ಲದರ ಕಲ್ಪನೆ ಹುಡುಗಿಯರಿಗೆ ಸಿಕ್ಕುವ ದಾರಿಗಳು, ರೀತಿಗಳು ಹುಡುಗರಿಗೆ ಸಿಕ್ಕಂತಲ್ಲ. ಸಂಕೋಚ – ಗುಟ್ಟು –ತಿಳಿಯ ಬೇಕೆಂಬ ಕುತೂಹಲ –ಅಚ್ಚರಿ ಎಲ್ಲವೂ ಮಿಳಿತಗೊಂಡ ಭಾವನೆಗಳು ಹುಡುಗಿಯರಲ್ಲಿ (ಹುಡುಗರಿಗೆ ಹೋಲಿಸಿದರೆ) ಹೆಚ್ಚು. ಸಹಜವಾಗಿ ಎಂ ಎಂಡ್ ಬಿ ಕಾದಂಬರಿಗಳು ಹುಡುಗಿಯರಿಗೆ ಈ ಕಾರಣಗಳಿಂದ ಆಕರ್ಷಕ ಎನಿಸುತ್ತದೆ. ಸುಂದರ ನಾಯಕ, ಸುಂದರಿ–, ಧೈರ್ಯವಂತ ಹುಡುಗಿ, ನಿರೀಕ್ಷಿತ ಯಾವುದೇ ತಿರುವುಗಳಿರದ ನೇರ, ಸರಳ ಕಥೆ. ಎಲ್ಲೂ ಬಡತನವಿರದ ಆರ್ಥಿಕತೆ, ಎಲ್ಲಕ್ಕಿಂತ ಹೆಚ್ಚಾಗಿ ಒಂದೆರಡು ಚುಂಬನ–, ಅಪ್ಪುಗೆಗಳೊಂದಿಗೆ 'ಸೂಚಿಸುವ' ನವಿರಾದ ಲೈಂಗಿಕ– ಭಾವನಾತ್ಮಕ ಪ್ರೇಮ! ಇವು ಹದಿಹರೆಯದ ಮನಸ್ಸಿಗೆ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುವ ಅವಕಾಶ ನೀಡುತ್ತವೆ. ಎಂ ಎಂಡ್ ಬಿ ಸರಣಿಯ ಕಾದಂಬರಿಗಳು 'ಶ್ರೇಷ್ಠ' ಕಾದಂಬರಿಗಳಂತೆ ಬಹುದಿನ ಮನಸ್ಸು ಕಾಡುವುದಿಲ್ಲ. ಕಣ್ಣಿನಲ್ಲಿ ನೀರು ತರಿಸುವುದಿಲ್ಲ. ಆದರೆ ಹರೆಯದ ಮನಸ್ಸನ್ನು ಪ್ರೇಮದತ್ತ ತಿರುಗದಂತೆ ಬಿಗಿ ಹಿಡಿಯಲು ಸಹಾಯಕವೇ ಎನಿಸುತ್ತದೆ! ಆ ಭಾವನೆಗಳಿಗೆ ಉಪಶಮನ ನೀಡುತ್ತದೆ. ಒಂದು ಸುರಕ್ಷಿತ ಮಾರ್ಗ ತೋರಿಸುತ್ತದೆ.

ಮೊನ್ನೆ ಬುಕ್‌ಹೌಸ್‌ನಲ್ಲಿ ಎಂ ಎಂಡ್ ಬಿ ಕಾದಂಬರಿಗಳನ್ನು ನೋಡಿದಾಗ, ಕುತೂಹಲಕ್ಕೆಂದು ಕೆಲವು ಪುಸ್ತಕಗಳನ್ನು ಖರೀದಿಸಿದೆ. ಹಿಂಜರಿಕೆಯೂ ಇರಲಿಲ್ಲ. ಸಂಕೋಚವೂ ಆಗಲಿಲ್ಲ! ಹದಿನೆಂಟರ ಹರೆಯ ಕಳೆದಿತ್ತಲ್ಲ! ಮನೋವೈದ್ಯಕೀಯ ಬುದ್ಧಿ ಹಿಂದಿನ ಎಂ ಎಂಡ್ ಬಿ ಗಳಿಗೂ, ಇಂದಿನ ಎಂ ಎಂಡ್ ಬಿ ಗಳಿಗೂ ಹೋಲಿಸಲಾರಂಭಿಸಿತು. ನೋಡುತ್ತಾ ಹೋದರೆ ಬಳಸುವ ಇಂಗ್ಲಿಷ್ ಭಾಷೆ ಸ್ವಲ್ಪ ಬದಲಾಗಿತ್ತು. ಭಾರತದ ಹೀರೋ– ಅಮೆರಿಕದ ಹೀರೋಯಿನ್ ಪ್ರೇಮ ಇತ್ತು. ಎಲ್ಲಕ್ಕಿಂತ ಗಮನ ಸೆಳೆದದ್ದು ಹೆಚ್ಚಿನ ನಾಯಕಿಯರು 30ರ ವಯಸ್ಸು, ವಿಚ್ಛೇದಿತ, ಮದುವೆಯಿಂದ ದೂರವಾಗಿ ಒಂದೋ ಹಿಂದಿನ ಗಂಡನೊಡನೆಯೇ ಮತ್ತೆ ಒಂದುಗೂಡುವ ಅಥವಾ ಹಿಂದಿನ ಗಂಡನ ಹಿಂಸೆ / ಮಾನಸಿಕ ತಾಕಲಾಟದಿಂದ ಹೊರಬಂದು ಇನ್ನೊಬ್ಬ ಒಳ್ಳೆಯ 'ಮನುಷ್ಯ'ನೊಡನೆ ಸಂಸಾರ ನಡೆಸಲು ಆರಂಭಿಸುವ ಬದಲಾವಣೆ!

ಇದರೊಂದಿಗೆ, ಹೆಚ್ಚಿನ ನಾಯಕಿಯರಿಗೆ ಕ್ಯಾನ್ಸರ್ ಬಂದು ಗುಣಮುಖರಾಗಿರುವುದು, ಯಾವುದೋ ಕಾರಣದಿಂದ ಮಕ್ಕಳಾಗದೆ ಕೊನೆಯಲ್ಲಿ ನಾಯಕ – ನಾಯಕಿ ಮಗುವನ್ನು ದತ್ತು ತೆಗೆದುಕೊಂಡು ಮದುವೆಯಾಗುವುದು. ಅಂದರೆ ಸಮಾಜ ಬದಲಾದಂತೆ, ಸಮಸ್ಯೆಗಳು ಬದಲಾದಂತೆ ಸಾಹಿತ್ಯವೂ ಬದಲಾಗುತ್ತದೆ!

ಈ ಎಂ ಎಂಡ್ ಬಿ ಕಾದಂಬರಿಗಳು ಮೊದಲು ಆರಂಭವಾದದ್ದು 1908ರಲ್ಲಿ. ಮುಂದೆ 1930ರಲ್ಲಿ ಕೇವಲ 'ಪ್ರಣಯ ಕಾದಂಬರಿ'ಗಳಿಗೇ ಪ್ರಾಶಸ್ತ್ಯ ನೀಡಲಾಯಿತು. ಬ್ರಿಟನ್‌ನಲ್ಲಿ ವಾಣಿಜ್ಯ ಲೈಬ್ರರಿಗಳು ಹೆಚ್ಚಿದಂತೆ ಈ ಪುಸ್ತಕಗಳ ಬೇಡಿಕೆಯೂ ಏರಿತು. ಬ್ರಿಟನ್‌ನಲ್ಲಿ ಮಹಾಯುದ್ಧದ 'ಖಿನ್ನತೆ' ಯ ಸಮಯದಲ್ಲಿ ಈ 'ಪ್ರಣಯ' ಕಾದಂಬರಿಗಳು ಜನರ 'ಪಲಾಯನ' ವಾದಿತ್ವಕ್ಕೆ (ಅಂದರೆ ಕಷ್ಟಗಳ ಮಧ್ಯೆಯೂ ಕಲ್ಪನಾ ಲೋಕದಲ್ಲಿ ವಿಹರಿಸಲು) ಸಾಧನಗಳಾದವು. ಇಂದಿಗೂ ಜನಪ್ರಿಯತೆ ಕುಂದಿಲ್ಲ. ಅಂಕಿ– ಅಂಶಗಳ ಪ್ರಕಾರ ಪ್ರತಿ ವರ್ಷ 200 ದಶಲಕ್ಷ ಎಂ ಎಂಡ್ ಬಿ ಕಾದಂಬರಿಗಳು ಮಾರಾಟವಾಗುತ್ತವೆ. ಅಂದರೆ, ಪ್ರತಿ 6.6. ಸೆಕೆಂಡಿಗೆ ಒಂದು ಕಾದಂಬರಿ ಮಾರಾಟವಾಗುತ್ತದೆ!

ಎಂ ಎಂಡ್ ಬಿ ಕಾದಂಬರಿಗಳ ದೋಷ ಏಕತಾನತೆ, (ಒಂದೇ ರೀತಿಯ ಅಂತ್ಯ–ಓಟಗಳು), ಅತಿ ಆದರ್ಶ ಪ್ರೇಮ ಎನ್ನುತ್ತಾರೆ. ಆದರೆ ಸರಿಯಾಗಿ ನೋಡಿದರೆ ಅದು ಹರೆಯದ ಮನಸ್ಸಿನ ಅಭಿವ್ಯಕ್ತಿಯೂ ಹೌದು. ಹರೆಯದ ಮನಸ್ಸಿಗೆ ಅದು ರುಚಿಸಿದಷ್ಟು, ಅದೇ ಮನಸ್ಸು ಪ್ರಬುದ್ಧವಾದಾಗ ರುಚಿಸುವುದಿಲ್ಲ ಎಂಬುದು ನಿಜವಾದ ಮಾತು. ಆದರೆ ಲೈಂಗಿಕ ಶಿಕ್ಷಣದ ಗೋಜು–ಗೊಂದಲಗಳು, ಪರ–ವಿರೋಧಗಳನ್ನು ಕಂಡಾಗ, ಸಾಹಿತ್ಯದ ಮುಖಾಂತರ ವಯಸ್ಸಿಗೆ ತಕ್ಕ ಲೈಂಗಿಕ ಶಿಕ್ಷಣ ಅಂದರೆ ನಿಜವಾದ ಅರ್ಥದಲ್ಲಿ ಕುಟುಂಬ ಜೀವನ ಶಿಕ್ಷಣ 'ಪ್ರಣಯ' ಕಾದಂಬರಿಗಳ ಮುಖಾಂತರ ಸಾಧ್ಯವಾದೀತೇನೋ! ಏಕೆಂದರೆ, 'ಪ್ರೇಮ' ವನ್ನು ಈ ಕಾದಂಬರಿಗಳು (ಸಾಯಿಸುತೆ – ಉಷಾ ನವರತ್ನರಾಂರ ಕಾದಂಬರಿಗಳನ್ನು ಒಳಗೊಂಡಂತೆ) ವೈಭವೀಕರಿಸಬಹುದಾದರೂ, ಮೌಲ್ಯಗಳನ್ನು ಇಲ್ಲಿನ ನಾಯಕ–ನಾಯಕಿಯರು ಬಿಡುವುದಿಲ್ಲ! ಸಾಹಿತ್ಯದ ದೃಷ್ಟಿಯಿಂದ ಇವು ಅತ್ಯುತ್ತಮ ಎನಿಸದಿರಬಹುದು, ಭಾವ–ಬುದ್ಧಿಗಳನ್ನು ತಟ್ಟದಿರಬಹುದು, ಆದರೆ ಹರೆಯದಲ್ಲಿ 'ಉಪಯುಕ್ತ' ಎನಿಸಬಲ್ಲವು. ಪ್ರಯೋಗಮುಖೇನ ಅನುಭವಿಸಬಹುದಾದ 'ಹದಿಹರೆಯದ ಪ್ರೇಮಪ್ರಕರಣ', 'ಅಂತರ್ಜಾಲದ ತಾಣಗಳು' 'ಫೇಸ್‌ಬುಕ್ ' ಗಳಿಗಿಂತ ನಿರಪಾಯಕಾರಿ ಎನಿಸಬಲ್ಲವು.

ನಮ್ಮ ತಾಯಿ ಹಿಂದೊಮ್ಮೆ ಪತ್ರಿಕೆಯೊಂದರಲ್ಲಿ ಖ್ಯಾತ ಸಾಹಿತಿ ಎಂ.ಕೆ. ಇಂದಿರಾರ ಬಳಿ ಪ್ರಶ್ನೋತ್ತರ ಕಾಲಂ ನಲ್ಲಿ "ನಮ್ಮ ಮಕ್ಕಳು ತುಂಬಾ ಕಾದಂಬರಿ ಓದುತ್ತಾರೆ. ಭೈರಪ್ಪನವರ ಪರ್ವದಂತ ಕಾದಂಬರಿ, ಐತಿಹಾಸಿಕ, ಪತ್ತೇದಾರಿ, ಸಾಮಾಜಿಕ ಹೀಗೆ ಎಲ್ಲವನ್ನೂ ಸತತವಾಗಿ ಓದುತ್ತಾರೆ. ಅವರು ಕೆಟ್ಟುಹೋದರೆ? ಅಂತ ಭಯವಾಗುತ್ತದೆ" ಎಂದು ಕೇಳಿದ್ದರಂತೆ. ಆಗ 70ರ ವೃದ್ಧಾಪ್ಯದಲ್ಲಿದ್ದ ಎಂ.ಕೆ. ಇಂದಿರಾರವರು ಕೊಟ್ಟ ಉತ್ತರ 'ನಾನೂ ಹಾಗೇ ಓದುತ್ತಲೇ ಇಲ್ಲಿಯವರೆಗೆ ಬಂದಿದ್ದೇನೆ. ಇನ್ನೂ ಕೆಟ್ಟು ಹೋಗಿಲ್ಲ!'

ಹಾಗೆ ನೋಡಿದರೆ ನಮ್ಮ ಹರೆಯದಲ್ಲಿ ಕಲ್ಪನೆಗಷ್ಟೇ ಪ್ರೇಮವನ್ನು ಮಧುರವಾಗಿ ಸೀಮಿತಗೊಳಿಸಿ, ನಮ್ಮ ಗುರಿಗಳನ್ನು ನಾವು ಕಂಡುಕೊಳ್ಳಲು ಸಾಧ್ಯವಾಗಿದ್ದು, ಈ ಪ್ರಣಯ ಕಾದಂಬರಿಗಳಿಂದಲೇ! ಅದರ ಜೊತೆಗೆ ಈ ಕಾದಂಬರಿಗಳು ನಮಗೆ ನೀಡಿದ ಮಧುರ ಭಾವನೆಗಳು, ಓದುವಾಗ ಸಂತೋಷ ಇವು ಇಂದಿಗೂ 'ನಾಸ್ಟಾಲ್ಜಿಯಾ' ಆಗಿಯೇ ಉಳಿದಿವೆ. ಈಗಂತೂ ಅಪ್ರಬುದ್ಧ, ಸಂಬಂಧಗಳಲ್ಲಿ ಅಕಾಲಿಕ ಪ್ರೇಮ ತೊಡಗಿರುವ ಹದಿಹರೆಯದ ಮಕ್ಕಳನ್ನು ಯುವಕ–ಯುವತಿಯರನ್ನು ನೋಡಿದಾಗ ಇವರಿಗೇಕೆ ತಮ್ಮ ಭಾವನೆಗಳನ್ನು ಈ ಕಾದಂಬರಿಗಳನ್ನು ಓದುವ ಮೂಲಕ ನಿಯಂತ್ರಿಸಲು ಸಾಧ್ಯವಾಗಿಲ್ಲ ಎಂಬ ಪ್ರಶ್ನೆ ಕಾಡತೊಡಗುತ್ತದೆ.